ಕವಿತೆ



## ಮಧುರಚೆನ್ನ

ಕಲೆ: ಮುರಳೀಧರ್ ರಾಥೋಡ್



# ಕಡು ಮತಸ್ಥರು

ಕಣ್ಣಳತೆಯಲ್ಲೊಂದು ದನಿಯಿತ್ತು
ಕೂಗಳತೆಯಲ್ಲೊಂದು ಬನಿಯಿತ್ತು
ಮಾತೇ ಮುಂದಾದಾಗ ಕರ್ಣ ಕಮರಿತ್ತು
ನೋಟ ಹಿಂದಾದಾಗ;
ಕಾಡು ಮುದುಡಿ ನಾಡು ಕೊನರಿತು.

ಅನ್ನದ ಬಳ್ಳಿಯ ಹೂವಿಗೊಂದು
ಕಣ್ಣು ಮೂಡಿ ಬಂದಿತ್ತು
ಅಣೆಕಟ್ಟಿನ ನೀರು ಬಿದ್ದು
ಹುಣ್ಣು ಎದ್ದಿತ್ತು
ಹಸಿವು ಅನ್ನಕ್ಕೆ, ದಾಹ ಗುಟುಕಿಗೆ
ತೆವಳಿ ಬಂದ ಗಾಳಿ ಹಕ್ಕಿಗೆ
ಕುರುಡು ರೆಕ್ಕೆ ಚಿಗುರಿತ್ತು.

ನಾನು ಪ್ರೀತಿಯ ಮಣ್ಣು
ಆಕೆ ಒಲವಿನಾ ಹೆಣ್ಣು
ಮೇಘರಾಗ ಮಳೆಯ ಅನುರಾಗ
ನೆಲ ಮಲ್ಲಿಗೆಯಾಯಿತು;
ಇಲ್ಲಿಗೆ ಅಲ್ಲಿಗೆ ಜೀವ ತೇರಿಗೆ
ಚಲನೆ ಸಿಕ್ಕಿತು;
ಗಾಲಿ ಚಕ್ರ ಬಂಡಿ ಮೋಟಾರು
ಡಾಂಬರು ಮೆಂಬರು ಅಧಿಕಾರ ಕಹಿನೆತ್ತರು
ಕುರಾಜಕೀಯದಲ್ಲಿ ನಮ್ಮಿಬ್ಬರನ್ನು ತೆತ್ತು
ಪಕ್ಷಪಕ್ಷ ಬಿತ್ತಿದರು; ಇರುವೆ ಗೂಡುಗಳ ಮುಚ್ಚಿದರು.

ಪತಂಗದೊಳಚಿಟ್ಟೆಯಲ್ಲೊಂದು ಜೀವಕೋಶ
ಸುರಂಗದ ಒಡಲಾಳದಲ್ಲೊಂದು ಕೀಟ ವಂಶ
ತರಂಗದ ದನಿಯಿಂಚರದೊಳು ಮೂಡಿ ಅನೂಷ
ಗಬಕ್ಕನೆ ಎಲ್ಲವೂ ಮನುಷ್ಯ ಕೈವಶ; ಮೆದುಳು ವಿಷ.

ಪಕ್ಷಗಳು ಗೆದ್ದವು ಮನೆಗಳು ಎದ್ದವು
ಹುತ್ತಗಳು ಬಿದ್ದವು ಮರಗಳು ಮುರಿದವು
ಹಾವು ಏಡಿ ಹುಳ ಹುಪ್ಪಟೆಗಳು
ಮತಯಂತ್ರಕ್ಕೆ ಸಿಕ್ಕು ಅಪ್ಪಚ್ಚಿಯಾದವು
ನಾವು ಕಡುಮತಸ್ಥರು; ಸಗಣಿ ಹುಳುವಿನ
ಹೊಸ ಹೂಸಿಗೆ ಅಸುನೀಗುವವರು.